**ದಿನಾಂಕಃ08.08.2024 ರಂದು ಸಾಕ್ಷಿದಾರರು ಹಾಜರಿದ್ದು, ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.**

**ಮುಂದುವರಿದ ಪಾಟೀ-ಸವಾಲುಃ ಆರೋಪಿ ಪರ ಶ್ರೀ ಆರ್.ಬಿ.ಆರ್. ವಕೀಲರಿಂದಃ-**

ಆರೋಪಿ ಬ್ಯಾಂಕ್‌ನಲ್ಲಿ ಸಾಲ ಕೊಡಿಸುವ ಕೆಲಸ ಮಾಡುತ್ತಾರೆ ಎಂದು ನನಗೆ ಹೇಳಿದ್ದರು. ಖುದ್ದಾಗಿ ನನಗೆ ಆರೋಪಿ ಏನು ಕೆಲಸ ಮಾಡುತ್ತಾರೆ ಎಂದು ಗೊತ್ತಿಲ್ಲ. ನನಗೆ ವಾರ್ಷಿಕ ರೂ.8-10 ಲಕ್ಷ ಆದಾಯ ಇರುತ್ತದೆ. ನನ್ನದು ಬೀಡಿ ವ್ಯವಹಾರ, ವ್ಯವಸಾಯ ಮತ್ತು ಪಾಲುದಾರಿಕೆಯಲ್ಲಿ ಪೆಟ್ರೋಲ್ ಬಂಕ್ ಇರುತ್ತದೆ. ಸದರಿ ನನ್ನ ಆದಾಯಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನನ್ನ ಆದಾಯದ ಮೂಲದ ಬಗ್ಗೆ ನೋಟೀಸ್‌ನಲ್ಲಿ ಮತ್ತು ದೂರಿನಲ್ಲಿ ಹೇಳಿರುವುದಿಲ್ಲ. ಆರೋಪಿ ನನ್ನ ಬಳಿ ತಮಗೆ ಹಣದ ಅಡಚಣೆಯಾಗಿದ್ದು ಸಾಲ ಮಂಜೂರಾಗುವುದು ಬಾಕಿ ಇರುತ್ತದೆ ಆ ಕಾರಣಕ್ಕಾಗಿ ಹಣ ಕೊಡಿ ಎಂದು ಕೇಳಿದ್ದರು. ಏನು ಹಣದ ಅಡಚಣೆ ಇತ್ತು ಎಂದು ನಿಖರವಾದ ಕಾರಣ ನನಗೆ ಗೊತ್ತಿಲ್ಲ.

ಈ ಪ್ರಕರಣದಲ್ಲಿ ಹೇಳಿರುವ ವ್ಯವಹಾರವನ್ನು ಬಿಟ್ಟು ನನ್ನ ಮತ್ತು ಆರೋಪಿಯ ಮಧ್ಯ ಬೇರೆ ಯಾವುದೇ ಹಣದ ವ್ಯವಹಾರ ಇರುವುದಿಲ್ಲ. ನಾನು ಪೆಟ್ರೋಲ್ ಬಂಕ್ ವ್ಯವಹಾರದ ಬಗ್ಗೆ ಆದಾಯ ತೆರಿಗೆ ಪಾವತಿಸುತ್ತೇನೆ. ಅದನ್ನು ಹೊರತುಪಡಿಸಿ ವೈಯುಕ್ತಿಕ ಆದಾಯತೆರಿಗೆ ಪಾವತಿ ಮಾಡುವುದಿಲ್ಲ. ಆರೋಪಿ ಹಣವನ್ನು ಹಿರಿಯೂರಿನಲ್ಲಿ ಕೇಳಿರುವುದಿಲ್ಲ. ಮಾರೀಕಣಿವೆ ಗ್ರಾಮದಲ್ಲಿ ಕೇಳಿರುತ್ತಾರೆ, ಈ ವಿಷಯವನ್ನು ದೂರಿನಲ್ಲಿ ಹೇಳಿರುತ್ತೇನೆ.

ರಾಮಕೃಷ್ಣ ಆಚಾರಿ ನನ್ನ ಒಳ್ಳೆಯ ಸ್ನೇಹಿತರು ಎಂದರೆ ಸರಿ. ಆರೋಪಿ ಮತ್ತು ರಾಮಕೃಷ್ಣ ಆಚಾರಿಯ ನಡುವೆ ಒಳ್ಳೆಯ ಬಾಂಧವ್ಯ ಇರುತ್ತದೆ ಎಂದರೆ ಸರಿ. ಇಬ್ಬರು ಒಬ್ಬರಿಗೊಬ್ಬರ ಮನೆಗಳಿಗೆ ಹೋಗಿಬಂದು ಮಾಡುತ್ತಿದ್ದರು ಎಂದರೆ ಸರಿ. ರಾಮಕೃಷ್ಣ ಆಚಾರಿಯವರ ಜೊತೆಗೆ ನಾನು ಒಂದೆರಡು ಬಾರಿ ಆರೋಪಿಯ ಮನೆಗೆ ಹೋಗಿರುತ್ತೇನೆ ಎಂದರೆ ಸರಿ. ಹಣ ಪಡೆಯುವಾಗ ಹಾಜರಿದ್ದ ವ್ಯಕ್ತಿಗಳನ್ನು ನ್ಯಾಯಾಲಯಕ್ಕೆ ಕರೆಸಿ ಸಾಕ್ಷಿ ವಿಚಾರಣೆ ಮಾಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ಹಣ

ನೀಡಿದ ನಂತರ ನನಗೂ ಮತ್ತು ಆರೋಪಿಗೂ ಮುಖಾಮುಖಿ ಭೇಟಿಯಾಗಿರುವುದಿಲ್ಲ, ಫೋನಿನಲ್ಲಿ ಮಾತನಾಡಿರುತ್ತೇನೆ.

ಆರೋಪಿ ದೂರಿನಲ್ಲಿ ಮತ್ತು ನೋಟೀಸ್‌ನಲ್ಲಿ ಬರೆದ ವಿಳಾಸದಲ್ಲಿಯೇ ವಾಸವಾಗಿರುತ್ತಾರೆ ಎಂದರೆ ಸರಿ. ಆರೋಪಿಗೆ ನಾನು ಕಳುಹಿಸಿದ ನೋಟೀಸ್ ಜಾರಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ನೋಟೀಸ್ ಖುದ್ದು ಜಾರಿಯಾಗದೇ ಇದ್ದರೂ ಸಹ ಜಾರಿಯಾಗಿರುತ್ತದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ–1 ಚೆಕ್‌ನ್ನು ಆರೋಪಿ ನೇರವಾಗಿ ರಾಮಕೃಷ್ಣ ಆಚಾರಿಯವರಿಗೆ ನೀಡಿದ್ದು ಅವರಿಂದ ನಾನು ಅದನ್ನು ಪಡೆದು ನನ್ನ ಹೆಸರಿನಲ್ಲಿ ಬ್ಯಾಂಕ್‌ಗೆ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

ನಿಪಿ–1 ರಲ್ಲಿರುವ ಬರವಣಿಗೆ ಬೇರೆ ಬೇರೆ ಪೆನ್ನಿನ ಷಾಯಿಗಳಲ್ಲಿ ಇದ್ದು ಅದನ್ನು ನಾನೇ ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ–2 ಬ್ಯಾಂಕ್‌ನ ಮೆಮೋವನ್ನು ಪ್ರಕರಣಕ್ಕೆ ಪೂರಕವಾಗಿ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ–3 ನೋಟೀಸ್ ಆರೋಪಿಗೆ ಜಾರಿಯಾಗಿಲ್ಲ ಎಂದರೆ ಸರಿಯಲ್ಲ. ಆರೋಪಿ ಮತ್ತು ನನ್ನ ನಡುವೆ ಯಾವುದೇ ಹಣಕಾಸಿನ ವ್ಯವಹಾರ ಇಲ್ಲ ಎಂದರೆ ಸರಿಯಲ್ಲ. ಆರೋಪಿಗೆ ರೂ.500/– ಮುಖಬೆಲೆಯ ನೋಟುಗಳಲ್ಲಿ ಹಣ ನೀಡಿರುತ್ತೇನೆ. ರೂ.3,00,000/– ಹಣ ದಿನಾಂಕಃ24.09.2020 ರಂದು ನನ್ನ ಬಳಿ ಇತ್ತು ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಆರೋಪಿಯಿಂದ ಹಣದ ದುರ್ಲಾಭ ಪಡೆಯುವುದಕ್ಕೋಸ್ಕರ ಅವರ ಮೇಲೆ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತಲೇಖನ ಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹಿರಿಯೂರು.